Sri A. BHEEMAPPA NAIK.—Is it a proper policy to give lands to people who are in the City, who do business? Is it not the object of the Government to see that agriculturists are encouraged by granting lands to them?

Sri T. CHANNIAH.—I cannot sit in judgment over what has already been done in the matter.

ಶ್ರೀ ಎಸ್. ಸಿದ್ದಪ್ಪ.—ಮಾಗಡಿ ತಾಲ್ಲೂಕಿನಲ್ಲಿ ಕೆಲವು ಮ್ಯೂನರ್ ಫಾರೆಸ್ಟ್ ಜಮೀನುಗಳನ್ನು ರೈತರಿಗೆ ಕೊಡುವುದಕ್ಕಾಗಿ surrender ಮಾಡಿದೆಯೇ?

Sri T. CHANNIAH.—That does not arise.

ಶ್ರೀ ಎಸ್. ಸಿದ್ದಪ್ಪ.—ಗಂಗಾಧರಸ್ವಾಮಿಯವರಿಗೆ ಜಮೀನನ್ನು ಕೊಟ್ಟು ಎಷ್ಟು ವರ್ಷವಾಯಿತು?

ಶ್ರೀ ಟಿ. ಚನ್ನಯ್ಯ.—ನೋಟೀಸ್.

Sri B. V. NARAYANA REDDY.—Does this Gangadharaswami belong to depressed class community?

(No answer.)

ಶ್ರೀ ಎಸ್. ಗೋಪಾಲಗೌಡ.—ಇಲ್ಲಿ ಕೊಟ್ಟಿರುವ 25 ಎಕರೆ, 50 ಎಕರೆ ಮುಂತಾದವುಗಳನ್ನು ಕೊಡುವುದರಲ್ಲಿ ಅದಕ್ಕೇನಾದರೂ ಹಣ ತೆಗೆದುಕೊಂಡು ಕೊಟ್ಟಿದೆಯೆ?

Mr. SPEAKER.—They are all details; the Minister requires notice.

Application for grant of lands in Kuluvadi Inam Tenure of Indavara Village, Chikmagalur Taluk.

Q.—81. Sri G. PUTTASWAMY (Chikmagalur-Mudigere — Scheduled Castes).—

Will the Government be pleased to state:—

(*a*) whether they are aware that the Kuluvadi Inam tenure of Indavara Village, Chikmagalur Taluk, is cancelled;

(*b*) the number of applications received praying for grant of land by different persons, communitywar and datewar;

(*c*) how many are land holders: (i) how many are landless and (ii) how many are *bona fide* cultivators?

A.—Sri KADIDAL MANJAPPA (Minister for Revenue and Public Works).—

(*a*) The Inam Tenure of S. Nos. 55, 73, 75, 84, 62, 86, 87, 145, 146, 276, 283, 287 and 198 have been cancelled.

(*b*) Twenty-two applications have been received for which castewar details are given below:—

	Caste		*No. of applications*	*Date of receipt*
1	Adikarnatakas	..	11	3-2-1953
2	Washermen	..	1	21-1-1953
3	Fishermen	..	2	21-1-1953
4	Lingayets	..	4	Jan. 15, 17, 19 and 22 of 1953
5	Vokkaliga	..	1	17-2-1953
6	Carpenters	..	1	21-1-1953
7	Muslims	..	2	12-2-1953 and 24-3-1953

(*c*) Two Lingayets and two Muslims;

(i) Eighteen applicants are landless;

(ii) All the applicants appear to be *bona fide* agriculturists.

ಶ್ರೀ ಜಿ. ಪುಟ್ಟಸ್ವಾಮಿ.—'ಎಲ್ಲಾ ಅರ್ಜಿದಾರರುಗಳೂ ಸಾಮಾನ್ಯವಾಗಿ ವ್ಯವಸಾಯಗಾರರೆಂದು ಕಂಡು ಬರುತ್ತದೆ' ಎಂದು ಹೇಳಿದ್ದೀರಿ. ಈ ಅರ್ಜಿದಾರರುಗಳಲ್ಲಿ ಇಬ್ಬರು ನೌಕರರೂ ಇದ್ದಾರೆಂದು ತಮಗೆ ಕಂಡುಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೇಳಿಸಲಿಲ್ಲ; ಮತ್ತೊಮ್ಮೆ ಹೇಳಿ.

ಶ್ರೀ ಜಿ. ಪುಟ್ಟಸ್ವಾಮಿ.—(ಸಿ) ಪ್ರಶ್ನೆಗೆ ಉತ್ತರವಾಗಿ ಎಲ್ಲರೂ ವ್ಯವಸಾಯಗಾರರು ಎಂದು ಹೇಳಿದ್ದಾರೆ. ಆದರೆ ಇದರಲ್ಲಿ ಕೆಲವರು ನೌಕರರಿದ್ದಾರೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಇದರಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಆಫೀಸಿನ ನೌಕರರೊಬ್ಬರು, ತಾಲ್ಲೂಕಾ ಫೀಸಿನ ನೌಕರರೊಬ್ಬರು ಇದ್ದಾರೆಂದು ಹೇಳಿದರೆ ಅದನ್ನು ಗಮನಕ್ಕೆ ತೆಗೆದುಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರಿಸುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—18 ಜನ ಅರ್ಜಿದಾರರುಗಳಿಗೆ ಜಮೀನು ಸಿಲ್ಲವೆಂದು ಹೇಳಿದ್ದೀರಿ. ಅವರುಗಳು ಯಾರು ಯಾರು ಎಂಬುದನ್ನು ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಜಮೀನಿಲ್ಲದವರಿಗೆ ಜಮೀನು ಕೊಡಬೇಕೆಂಬುದೇ ಸರ್ಕಾರದ ನೀತಿ. ಆ ಪ್ರಕಾರ record ತಯಾರಾಗುತ್ತಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಒಂದನೆಯ ಪ್ರಶ್ನೆಗೆ ಉತ್ತರವಾಗಿ ಇನಾಂ ಚೆನ್ಯೂರನ್ನು ವಜಾಮಾಡಲಾಗಿದೆಯೆಂದು ಹೇಳಿದ್ದೀರಿ. ಹೀಗೆ ರದ್ದುಮಾಡಿರತಕ್ಕ ಇನಾಂ ಜಮೀನು ಕುಳವಾಡಿಗಳಿಗೆ ಮಂಜೂರು ಮಾಡುವುದಕ್ಕೆ ಅವಕಾಶವಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ನಿರ್ಧರವಾಗಿ ಹೇಳಲಾರೆ.

ಶ್ರೀ ಜಿ. ಪುಟ್ಟಸ್ವಾಮಿ.—Village Officers Rules ಪ್ರಕಾರ ಅದಕ್ಕೆ ಅವಕಾಶವಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇನಾಂ ಚೆನ್ಯೂರ್ ವಜಾ ಆದರೆ ಯಾರಿಗೆ ಬೇಕಾದರೂ ಕೊಡಬಹುದು.

ಶ್ರೀ ಕೆ. ಪುಟ್ಟಸ್ವಾಮಿ.—ಹೊಲ ಇಲ್ಲದಿರುವವರಿಗೆ ಹೊಲ ಕೊಡುವುದೇ ಸರ್ಕಾರದ ನೀತಿಯೆಂಬುದು ಬರೀ ಗ್ರಂಥಗತವಾಗಿದೆ ; ಅದು ಕಾರ್ಯರೂಪಕ್ಕೆ ಬಂದಿಲ್ಲವೆಂದು ಹೇಳಿದರೆ ಅದನ್ನು ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಾರ್ಯರೂಪಕ್ಕೆ ಬಂದಿದೆಯೆಂದು ನಮಗೆ ತಿಳಿವಳಿಕೆ ಬಂದಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಕಾರ್ಯರೂಪಕ್ಕೆ ಬಂದಿಲ್ಲವೆಂದು ಹೇಳಿದರೆ ಅಂಥ ಸಂದರ್ಭವನ್ನು ಖುದ್ದು ವಿಚಾರಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಖಂಡಿತವಾಗಿ ವಿಚಾರಿಸುತ್ತೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಆ ರೀತಿಯಾಗಿ ಸರ್ಕಾರದ ನೀತಿಯನ್ನನುಸರಿಸದಿರುವ ಅಧಿಕಾರಿಗಳ ಮೇಲೆ ಏನು ಕಾರ್ಯಕ್ರಮ ಕೈಕೊಳ್ಳುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಆಯಾ ಸಂದರ್ಭವನ್ನವಲಂಬಿಸುತ್ತದೆ.

ಶ್ರೀ ಕೆ. ಪ್ರಭಾಕರ್.—ಜಮೀನಿಲ್ಲದವರಿಗೆ ಜಮೀನು ಬೇಕೆಂದು ಕೇಳಿದರೂ ಕೊಡದೆ ಇದ್ದಾರೆ. ಅವರ ಬೋನಾಫೈಡಿ ವಿಚಾರದಲ್ಲಿ ಅನುಮಾನ ಹೇಗೆ ಗೊತ್ತಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಅನುಮಾನ ಇರುವುದರಿಂದಲೇ ಗೊತ್ತಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ದರಖಾನ್ತು ಹಾಕಿದವರೆಲ್ಲರಿಗೂ ಜಮೀನು ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ದರಖಾನ್ತು ಹಾಕಿದವರೆಲ್ಲರಿಗೂ ಜಮೀನು ಕೊಡುವುದಕ್ಕೆ ಸಾಕಾದಷ್ಟು ಜಮೀನು ನಮ್ಮ ದೇಶದಲ್ಲಿಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಜಮೀನು ಕೊಟ್ಟ ಮೇಲೆ ಅವರಿಗೆ ಅದನ್ನು confirm ಮಾಡಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೊಟ್ಟಮೇಲೆ confirm ಮಾಡಿದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಕೆಲವರಿಗಿನ್ನೂ confirm ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ರಿಕಾರ್ಡ್‌ಗಳು ಬಂದಿಲ್ಲದಿರಬಹುದು.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ರಿಕಾರ್ಡ್‌ಗಳು ಬರದಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಸಾಕಾದಷ್ಟು ಕಾಲ ಅದಕ್ಕೆ ಬೇಕು.

Payment of Potgis to Village Officers.

Q.—142. Sri B. N. RAME GOWDA (Sira).—

Will the Government be pleased to state :—

(*a*) whether they are aware that the *potgis* paid to village officers are very low and require enhancement in view of their responsibilities and heavy work ;

(*b*) whether they are considering the desirability of paying monthly salaries to all the village officers as it is in vogue in the adjoining Madras Presidency ?

A.—Sri KADIDAL MANJAPPA (Minister for Revenue and Public Works).—

(*a*) This is a matter of opinion.

(*b*) Yes.

ಶ್ರೀ ಬಿ. ಎಸ್. ರಾಮೇಗೌಡ.—ಪಟೇಲರುಗಳು ಶ್ಯಾನುಭೋಗರುಗಳು ಪೋಟಗಿಯನ್ನು ಜಾಸ್ತಿಮಾಡ ಬೇಕೆಂದು ಸರ್ಕಾರದವರಿಗೇನಾದರೂ ಮನವಿ ಮಾಡಿ ಕೊಂಡಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಈಚೆಗೆ ಯಾವ ಮನವಿಯೂ ಬಂದಿಲ್ಲ.

ಶ್ರೀ ಬಿ. ಎಸ್. ರಾಮೇಗೌಡ.—ಆ ರೀತಿ ಮನವಿ ಮಾಡಿದ್ದರೆ ಪೋಟಗಿ ಜಾಸ್ತಿಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಜಾಸ್ತಿಮಾಡುವುದನ್ನು ಯೋಚನೆ ಮಾಡುತ್ತಾರೆ.

ಶ್ರೀ ಬಿ. ಎಸ್. ರಾಮೇಗೌಡ.—(b) ಪ್ರಶ್ನೆಗೆ ಉತ್ತರವಾಗಿ ಮಾಹೆಯಾನ ತಲಬನ್ನು ಕೊಡುವುದನ್ನು ಪರ್ಯಾಲೋಚನೆ ಮಾಡುತ್ತೇವೆಂದು ಹೇಳಿದ್ದೀರಿ ಪರ್ಯಾಲೋಚನೆ ಮಾಡಿ ತೀರ್ಮಾನಮಾಡಲು ಎಷ್ಟು ಕಾಲಬೇಕು?

ಶ್ರೀ ಕಡಿದಾಳ್ ಮಂಜಪ್ಪ.— ಎಷ್ಟು ಕಾಲಬೇಕೋ ಅಷ್ಟುಕಾಲ ಬೇಕಾಗುತ್ತದೆ.

ಶ್ರೀ ಬಿ. ಎಸ್. ರಾಮೇಗೌಡ.—ಜಾಗ್ರತೆ ಇದನ್ನು ತೀರ್ಮಾನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದಷ್ಟು ಜಾಗ್ರತೆ ಎಂದು ಹೇಳಬೇಕಾಗುತ್ತದೆ. ಎಷ್ಟು ಕಾಲ ಎಂದು ಹೇಳುವುದಕ್ಕಾಗುವುದಿಲ್ಲ.